OS.No.121/2022
P.w-1

ದಿನಾಂಕ 29-01-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್ ವಕೀಲರಿಂದ.**

ದಾವಾ ಆಸ್ತಿಗಳ ಸರ್ವೆ ನಂಬರ 482 ಆಗಿರುತ್ತದೆ. ಸರ್ವೆ ನಂಬರ 482 ಒಟ್ಟು 7 ಎಕರೆ 2 ಅಥವಾ 3 ಗುಂಟೆ ಇರುತ್ತದೆ. ಸರ್ವೆ ನಂಬರ 482 ಕ್ಕೆ 3 ಪೋಡಿಗಳು ಆಗಿರುತ್ತದೆ. ದಾವಾ ಆಸ್ತಿಗಳು ಮೊದಲು ಯಾರ ಹೆಸರಿನಲ್ಲಿದ್ದವು ಹೇಳಲು ಬರುವುದಿಲ್ಲ ಆದರೆ ಅವುಗಳನ್ನು ನನ್ನ ತಾತ ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ನನ್ನ ಅಜ್ಜ ಎಷ್ಟು ಹಣಕ್ಕೆ ಮತ್ತು ಯಾರಿಂದ ಖರೀದಿ ಮಾಡಿದ್ದರು ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ಅಜ್ಜ ಯಂಕಪ್ಪ ತಂದೆ ಯಲ್ಲನಗೌಡ ರವರು ಸ್ವಯಾರ್ಜಿತವಾಗಿ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಯಲ್ಲನಗೌಡ ರವರಿಗೆ ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಗೊತ್ತಿಲ್ಲ. ಯಲ್ಲನಗೌಡ ರವರಿಗೆ ದಾವಾ ಆಸ್ತಿಗಳು ಯಾರ ಹೆಸರಿನಿಂದ ಅವರ ಹೆಸರಿಗೆ ಆಗಿರುತ್ತವೆ ಗೊತ್ತಿಲ್ಲ. ದಾವಾ ಆಸ್ತಿಗಳು ಯಲ್ಲನಗೌಡ ರವರ ಹೆಸರಿನಲ್ಲಿ ಇದ್ದವು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ದಾವಾ ಆಸ್ತಿಗಳು ಎಂದಿಗೂ ಯಲ್ಲನಗೌಡ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಗಳು ನನ್ನ ಮುತ್ತಾತ ಯಲ್ಲನಗೌಡ ರವರ ಹೆಸರಿನಲ್ಲಿ ಇದ್ದವು ಎಂಬುದಾಗಿ ಬರೆಸಿರುವುದಿಲ್ಲ. ದಾವಾ ಆಸ್ತಿಗಳು ಯಲ್ಲನಗೌಡ ರವರ ಹೆಸರಿನಲ್ಲಿ ಎಂದಿಗೂ ಇರಲಿಲ್ಲ ಆದಕಾರಣ ಈ ಬಗ್ಗೆ ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಮತ್ತು ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ದಾವಾ ಆಸ್ತಿಗಳನ್ನು ಯಂಕಪ್ಪ ತಂದೆ ಯಲ್ಲನಗೌಡ ರವರು 1982 ರಲ್ಲಿ ಶಾಂತಪ್ಪ ತಂದೆ ಚನ್ನಬಸಪ್ಪ ಯಲಿ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ಸದರಿ ಖರೀದಿಯ ಆಧಾರದ ಮೇರೆಗೆ ಯಂಕಪ್ಪ ರವರ ಹೆಸರಿಗೆ ಮುಟೇಶನ್ ಆದೇಶ ಸಂಖ್ಯೆ 89 ದಿನಾಂಕ 14-09-1982 ರಂತೆ ಮುಟೇಶನ್ ಆಗಿರುತ್ತದೆ ಎಂದರೆ ನಿಜ. ಸದರಿ ಮುಟೇಶನ್ ಆದೇಶದ ಆಧಾರದ ಮೇರೆಗೆ ದಾವಾ ಆಸ್ತಿಗಳ ಪಹಣಿಗಳಲ್ಲಿ ಯಂಕಪ್ಪ ರವರ ಹೆಸರು ಬಂದಿರುತ್ತದೆ ಎಂದರೆ ನಿಜ. ಸದರಿ ಪಹಣಿ ಹಾಗೂ ಮುಟೇಶನ್ ನ ಪ್ರಕಾರ ಯಂಕಪ್ಪ ರವರೇ ದಾವಾ ಆಸ್ತಿಗಳ ಮಾಲೀಕರು ಮತ್ತು ಕಬ್ಜೆದಾರರು ಇದ್ದರು ಎಂದರೆ ನಿಜ. ಯಂಕಪ್ಪ ರವರು ದಿನಾಂಕ 23-10-1992 ರಂದು 4 ನೇ ಪ್ರತಿವಾದಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದರು ಎಂದರೆ ನಿಜ. ಸದರಿ ಕ್ರಯಪತ್ರದ ಆಧಾರದ ಮೇರೆಗೆ ದಾವಾ ಆಸ್ತಿಗಳು 4 ನೇ ಪ್ರತಿವಾದಿಯ ಹೆಸರಿಗೆ ಮುಟೇಶನ್ ಆಗಿರುತ್ತವೆ ಎಂದರೆ ನಿಜ. ಸಾಕ್ಷಿಗೆ ಈಗ ದಿನಾಂಕ 22-10-1992 ರ ನೋಂದಾಯಿತ ಕ್ರಯಪತ್ರದಲ್ಲಿರುವ ಹಂಪಣ್ಣ ರವರ ಸಹಿಯನ್ನು ತೋರಿಸಲಾಗಿ ಅದು ಹಂಪಣ್ಣ ರವರ ಸಹಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿರುವ ಸಹಿ ನನ್ನ ತಂದೆಯದ್ದು ಇದ್ದು ಆದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರಿ ಜನಿಸುವ ಮೊದಲೇ ನನ್ನ ಅಜ್ಜ ಯಂಕಪ್ಪ ರವರು ದಾವಾ ಆಸ್ತಿಗಳನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಯಂಕಪ್ಪ ರವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಸ್ವಂತ ದಾವಾ ಆಸ್ತಿಗಳನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರಿಂದ ಮತ್ತು ಆಗ ನಾವು ಜನಿಸದೇ ಇರುವುದರಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಯಂಕಪ್ಪ ರವರು ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದನ್ನು ತಮ್ಮ ಜೀವಿತಾವಧಿಯಲ್ಲಿ ಅವರಾಗಲೀ ಅಥವಾ ನನ್ನ ತಂದೆಯಾಗಲೀ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನಿಜ ಆದರೆ ನನ್ನ ತಾಯಿ ಮಾಡಿದ್ದರು ಎಂದು ಹೇಳುತ್ತಾರೆ. ಈ ಬಗ್ಗೆ ನನ್ನ ತಾಯಿ ದೇವದುರ್ಗ ನ್ಯಾಯಾಲಯದಲ್ಲಿ ಸದರಿ ಖರೀದಿಯನ್ನು ಪ್ರಶ್ನೆ ಮಾಡಿದ್ದರು. ಆಗ ನನ್ನ ತಾಯಿ 4 ಮತ್ತು 5 ನೇ ಪ್ರತಿವಾದಿಗಳ ವಿರುದ್ಧ ದಾವೆ ಹೂಡಿದ್ದರು. ನನ್ನ ತಾಯಿ ಆ ದಾವೆಯನ್ನು 1991 ರಲ್ಲಿ ಹೂಡಿದ್ದರು. ನನ್ನ ತಾಯಿ ಹೂಡಿದ್ದ ದಾವೆಯ ಸಂಖ್ಯೆ ನನಗೆ ಗೊತ್ತಿಲ್ಲ. ಆ ದಾವೆ ಏನು ಆಗಿರುತ್ತದೆ ಗೊತ್ತಿಲ್ಲ. ನನ್ನ ತಾಯಿ ದಾವೆಯನ್ನು ಹೂಡಿದ್ದು ಮತ್ತು ಅವರು ನ್ಯಾಯಾಲಯಕ್ಕೆ ಬರುತ್ತಿದ್ದಿದ್ದು ನನಗೆ ಮೊದಲಿನಿಂದಲೂ ಮಾಹಿತಿ ಇರುತ್ತದೆ. 1991 ರಿಂದ 4 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು ಮತ್ತು ಅದನ್ನು 5 ನೇ ಪ್ರತಿವಾದಿಯ ಹೆಸರಿಗೆ ಮುಟೇಶನ್ ಮಾಡಿಸಿಕೊಟ್ಟಿದ್ದು ನನಗೆ ಗೊತ್ತಿದ್ದರೂ ಸಹ ನಾನು ಅದನ್ನು ಪ್ರಶ್ನೆ ಮಾಡಿರುವುದಿಲ್ಲ. ನನಗೆ ದಾವಾ

ಆಸ್ತಿಗಳನ್ನು ಮಾರಾಟ ಮಾಡಿದ್ದು ಗೊತ್ತಿದ್ದು ಆದಕಾರಣ ಅದನ್ನು ನಾನು ಪ್ರಶ್ನೆ ಮಾಡಿರಲಿಲ್ಲ ಎಂದರೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದು ನನಗೆ ಗೊತ್ತಿದ್ದು ಆದರೆ ನಾನು ಊರಿನಲ್ಲಿ ಇರಲಿಲ್ಲ ಆದಕಾರಣ ಪ್ರಶ್ನೆ ಮಾಡಿರಲಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಈ ಮೊದಲು ದಾವೆ ಹೂಡಿರುವ ಬಗ್ಗೆ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ನನ್ನ ತಾಯಿ ದಾವೆ ಹೂಡಿದ್ದಾರೆಂದು ಹೇಳಿ ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ದಾವಾ ಆಸ್ತಿಗಳು ಖರೀದಿ ಆದಾಗಿನಿಂದ 4 ನೇ ಪ್ರತಿವಾದಿಯೇ ದಾವಾ ಆಸ್ತಿಗಳ ಮಾಲೀಕ ಹಾಗೂ ಕಬ್ಜೆದಾರ ಆಗಿದ್ದರು  ಎಂದರೆ ನಿಜ. 2001 ರಲ್ಲಿ 4 ಮತ್ತು 5 ನೇ ಪ್ರತಿವಾದಿಗಳ ಮಧ್ಯೆ ವಿಭಾಗ ಆಗಿದ್ದು ವಿಭಾಗದಲ್ಲಿ ದಾವಾ ಆಸ್ತಿಗಳು 5 ನೇ ಪ್ರತಿವಾದಿಯ ಭಾಗಕ್ಕೆ ಹೋಗಿರುತ್ತವೆ ಎಂದರೆ ನಿಜ. ನಂತರ 5 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗಳು ಮುಟೇಶನ್ ಆಗಿದ್ದು ಅದರ ಮುಟೇಶನ್ ನಂಬರ 55 ದಿನಾಂಕ 24-05-2001 ಆಗಿರುತ್ತದೆ ಎಂದರೆ ನಿಜ. ವಿಭಾಗ ಆದ ನಂತರ 5 ನೇ ಪ್ರತಿವಾದಿಯೇ ದಾವಾ ಆಸ್ತಿಗಳ ಮಾಲೀಕರು ಹಾಗೂ ಕಬ್ಜೆದಾರರು ಆಗಿರುತ್ತಾರೆ ಎಂದರೆ ನಿಜ. 5 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗಳು ಮುಟೇಶನ್ ಆದ ನಂತರ ಅವರು ಡಿಸಿಬಿ ಬ್ಯಾಂಕನಲ್ಲಿ ಬೆಳೆ ಸಾಲ 11,00,000/- ರೂ. ಗಳನ್ನು ಪಡೆದಿರುತ್ತಾರೆ ಎಂದರೆ ನಿಜ. ಆದಕಾರಣ ದಾವಾ ಆಸ್ತಿಗಳ ಮೇಲೆ ನನಗೆ, ನನ್ನ ಕುಟುಂಬಕ್ಕೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಅಜ್ಜನ ಆಸ್ತಿ ಮೊಮ್ಮಕ್ಕಳಿಗೆ ಬರುತ್ತದೆ ಎಂದು ಹೇಳುತ್ತಾರೆ. ಅಜ್ಜ ಬದುಕಿದ್ದಾಗ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದರಿಂದ ನಮಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇಲ್ಲ ಎಂದರೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದು ಹೇಳುತ್ತಾರೆ. ನನ್ನ ವಾದ ಪತ್ರದ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದೇವದುರ್ಗದಲ್ಲಿ ಈಗ ನೀರಾವರಿ ಬಂದಿದ್ದರಿಂದ ಜಮೀನುಗಳ ಬೆಲೆ ಹೆಚ್ಚಿಗೆ ಆಗಿದ್ದು ಆದಕಾರಣ ದಾವಾ ಆಸ್ತಿಗಳನ್ನು ಕಬಳಿಸಬೇಕು ಎಂದು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.